# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## ಎಸ್.ಸಿ –110/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಮಹದೇವ | ಫ್ರಾಸಾ: | 13 |
| ತಂದೆ ಹೆಸರು | : | ವೆಂಕಟೇಶ | ಚಾಸಾ: | 20 |
| ವಯಸ್ಸು | : | 24 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ:29.07.2025 | |
| ವೃತ್ತಿ | : | ಮೀನು ಹಿಡಿಯುವ ಕೆಲಸ | | |
| ವಾಸ ಸ್ಥಳ | : | ನಂಜನಗೂಡು | | |

**ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರವರಿಂದ**:

1. ಚಾಸಾ–19 ನನಗೆ ಗೊತ್ತು. ನಾನು ಕಪಿಲಾ ನದಿಯಲ್ಲಿ ಮೀನು ಹಿಡಿಯುವ ಕೆಲಸ ಮಾಡುತ್ತೇನೆ. ಚಾಸಾ–19 ರವರು ಕಪಿಲಾ ನದಿಯಲ್ಲಿ ದೋಣಿಯನ್ನು ನಡೆಸುವ ಕೆಲಸ ಮಾಡುತ್ತಾನೆ. ಅದರಲ್ಲಿ ನಾನು ಮೀನು ಹಿಡಿಯುತ್ತೇನೆ. ನಾನು ಸಹ ದೋಣಿಯನ್ನು ನಡೆಸುತ್ತೇನೆ. ನಾನು ಬೆಳಗ್ಗೆ 10.00 ಗಂಟೆಯಿಂದ ಸಂಜೆ 7– 8.00 ಗಂಟೆಯವರೆಗೆ ಮೀನು ಹಿಡಿಯುವ ಕೆಲಸವನ್ನು ಮಾಡುತ್ತೇನೆ. ಆರೋಪಿಯನ್ನು ನೋಡಿದ್ದೇನೆ.

2. ಸುಮಾರು 4 ವರ್ಷಗಳ ಹಿಂದೆ, ಒಂದು ದಿನ ಸಂಜೆ ಸುಮಾರು 7.30 ಗಂಟೆ ಸಮಯದಲ್ಲಿ ನಾನು ಮೀನು ಹಿಡಿಯುತ್ತಿದ್ದಾಗ ಕಿರುಚುಕೊಳ್ಳುವ ಶಬ್ಧ ಬಂದ ಮೇರೆಗೆ ನಾನು ಅಲ್ಲಿಗೆ ಹೋಗಿ ನೋಡಿದಾಗ ಆರೋಪಿಯ ಹೆಂಡತಿ ನೀರಿನಲ್ಲಿ ಸತ್ತು ಬಿದ್ದಿದ್ದಳು, ಆಗ ನಾನು ಮತ್ತು ಚಾಸಾ–19 ಸೇರಿ ಆಕೆಯನ್ನು ಎತ್ತಿ ದಿಣ್ಣೆಯ ಮೇಲೆ ಮಲಗಿಸಿದೆವು ಹಾಗೂ ಅವರ ಎರಡು ಮಕ್ಕಳನ್ನು ಎತ್ತಿ ದಿಣ್ಣೆಯ ಮೇಲೆ ಕೂರಿಸಿದೆವು. ಆಕೆಯು ತೀರಿಕೊಂಡಿದ್ದಳು. ಆಕೆಯ ಹೆಸರು ದೇವಿಕಾ.

3. ಅ ಎರಡು ಮಕ್ಕಳಲ್ಲಿ ಆರೋಪಿಯು ಯಾವ ಮಗುವಿಗೆ ಏನು ಮಾಡಿದ್ದರು ಎನ್ನುವುದು ಗೊತ್ತಿರುವುದಿಲ್ಲ. ತೀರಿಕೊಂಡ ಆಕೆ ಯಾರ ಮಗಳು ಎನ್ನುವುದು ಗೊತ್ತಿಲ್ಲ. ಚಾಸಾ–1 ರವರನ್ನು ನೋಡಿರುವುದಿಲ್ಲ. ಅ ಎರಡು ಮಕ್ಕಳಲ್ಲಿ ಒಂದು ಗಂಡು ಮತ್ತು ಒಂದು ಹೆಣ್ಣು. ಆಕೆಯ ಸಾವಿಗೆ ಯಾರು ಕಾರಣ ಮತ್ತು ಯಾವ ಕಾರಣದಿಂದ ಆಕೆ ಸತ್ತು ಹೋಗಿರುತ್ತಾಳೆ ಎನ್ನುವುದು ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ.

4. ಈ ವಿಚಾರವನ್ನು ನಾನು ನಂಜನಗೂಡಿನ ನ್ಯಾಯಾಧೀಶರ ಮುಂದೆ ಹೇಳಿ ಹೇಳಿಕೆಯನ್ನು ಕೊಟ್ಟಿದ್ದೇನೆ. ಸೀಲಾದ ಲಕೋಟೆಯಲ್ಲಿರುವ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ಸಾಕ್ಷಿಗೆ ತೋರಿಸಿ ಅವರು ಗುರುತಿಸಿದ ಮೇರೆಗೆ ಸದರಿ ಹೇಳಿಕೆಯನ್ನು **ನಿಪಿ.14** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.14(ಎ)** ಮತ್ತು **14(ಬಿ)** ಎಂದು ಗುರುತಿಸಲಾಯಿತು. ದೇವಿಕಾ ಸತ್ತ ವಿಚಾರಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಧೀಶರ ಮುಂದೆ ನಿಪಿ.14 ರಂತೆ ಹೇಳಿಕೆ ಕೊಟ್ಟಿದ್ದೇನೆ.

5. ದೇವಿಕಾಳ ಸಾವಿಗೆ ಯಾರು ಕಾರಣ ಎನ್ನುವ ಬಗ್ಗೆ ನಿಪಿ.14 ರಲ್ಲಿ ನಾನು ಹೇಳಿರುವುದಿಲ್ಲ. ನಾನು ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ ಮತ್ತು ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆಯಲ್ಲಿ ಆರೋಪಿಯು ದೇವಿಕಾಳನ್ನು ನೀರಿನಲ್ಲಿ ಮುಳುಗಿಸಿ ಸಾಯಿಸಿರುತ್ತಾನೆ ಎಂದು ಹೇಳಿರುವುದಿಲ್ಲ. ಅಂತೆಯೇ ಆರೋಪಿಯು ದೇವಿಕಾಳ ಶೀಲವನ್ನು ಶಂಕಿಸಿ ಆಕೆಯನ್ನು ನೀರಿನಲ್ಲಿ ಮುಳುಗಿಸಿ ಸಾಯಿಸಿರುತ್ತಾನೆ ಎಂದು ಹೇಳಿರುವುದಿಲ್ಲ. ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ ಆರೋಪಿಯ ಒಬ್ಬ ಹೆಂಗಸನ್ನು ಜುಟ್ಟು ಹಿಡಿದು

ನೀರಿನಲ್ಲಿ ಮುಳುಗಿಸಿ ಮುಳುಗಿಸಿ ಎತ್ತುತ್ತಿದ್ದ, ನಾವು ಅದನ್ನು ನೋಡಿ ಬರುವಷ್ಟರಲ್ಲಿ ಅವಳನ್ನು ನೀರಿಗೆ ಮುಳುಗಿಸಿ ಬಿಟ್ಟ ಎಂದು ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿಯು ಮಗುವನ್ನು ನೀರಿಗೆ ಎತ್ತಿ ಬಿಸಾಕಿಬಿಟ್ಟ ಎಂದು ನಾನು ಹೇಳಿಕೆ ನೀಡಿಲ್ಲ.

**(ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಃ ಸರ್ಕಾರಿ ಅಭಿಯೋಜಕರವರಿಂದ ಃ</u>**

6. ದಿಃ 16.12.2021 ರಂದು ನಾನು ಪೊಲೀಸರ ಮುಂದೆ ನೀಡಿರುವ ಹೇಳಿಕೆಯಲ್ಲಿ "ನಾನು ಮತ್ತು ವೆಂಕಟೇಶ ಅಯ್ಯಪ್ಪಸ್ವಾಮಿ ದೇವಸ್ಥಾನದ ಬಳಿ ------- ಹೆಂಗಸಿನ ಕಡೆಯವರು ಅಲ್ಲಿಗೆ ಬಂದರು". " ನಂತರ ಅಲ್ಲಿಗೆ ಬಂದ ಕಸುವಿನ ಹಳ್ಳಿ ಗ್ರಾಮದ ಪುಟ್ಟಸಿದ್ದಯ್ಯ ------- ತನ್ನ ಮಗ ಮಲ್ಲೇಶನನ್ನ ನೀರಿಗೆ ಎಸದಿರುತ್ತಾನೆ " ಎಂದು ಈಗ ನನಗೆ ಓದಿ ಹೇಳಿದ ರೀತಿ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು **ನಿಪಿ.15** ಎಂದು ಗುರುತಿಸಲಾಯಿತು.

7. ದಿಃ08.03.2022 ರಂದು ನಂಜನಗೂಡಿನ ಹಿರಿಯ ಸಿವಿಲ್ ನ್ಯಾಯಾಧೀಶರ ಮುಂದೆ " ನನಗೆ ಅ ಗಂಡಸು ಮಾತ್ರ ನೀರಿನಲ್ಲಿ ಕಾಣಿಸಿದ. ಸದರಿ ಮಹಿಳೆಯನ್ನು ಗಂಡಸು ನೀರಿನಲ್ಲಿ ಮುಳುಗಿಸಿ ಸಾಯಿಸಿಬಿಟ್ಟಿದ್ದ. ಇಬ್ಬರು ಮಕ್ಕಳನ್ನು ಬೇರೆಯವರು ಎತ್ತಿ ರಕ್ಷಿಸಿದ್ದರು" ಎಂಬುದಾಗಿ ನಾನು ಈಗ ನನಗೆ ಓದಿ ಹೇಳಿದ ರೀತಿ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು **ನಿಪಿ.14(ಸಿ)** ಎಂದು

ಗುರುತಿಸಲಾಯಿತು. ಈ ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ**

ಸಂಜೆ 7.30 –8.00 ಗಂಟೆ ಸಮಯದಲ್ಲಿ ಅಲ್ಲಿ ಸುಮಾರು ಜನ ಇರುತ್ತಾರೆ ಎಂದರೆ ಸರಿ. ಅ ಸ್ಥಳದಲ್ಲಿ ಯಾರು ಯಾರು ಇದ್ದರು ಎನ್ನುವುದು ಗೊತ್ತಿಲ್ಲ.

**ಮರುವಿಚಾರಣೆ ಃ ಇಲ್ಲ**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು